ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ:60/2015-16 ದಿ: 10-06-2016

ಉಪಸ್ಥಿತರು: ಬಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಕೆ. ಬಲ್ಲೂರಪ್ಪ ತಂದೆ: ಮಲ್ಲಿಕಾರ್ಜುನ ಅಲಿಯಾಸ್ ಮಲ್ಲಯ್ಯ
ಊಳೂರುಗ್ರಾಮ ಸಿರುಗುಪ್ಪ ತಾಲೂಕ
2) ಕೆ. ಪಾಂಡುರಂಗಪ್ಪ ತಂದೆ: ಹೇಮಾದ್ರಪ್ಪ ,
ಊಳೂರು ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಹೇಮಾದ್ರಪ್ಪ ತಂದೆ: ಬಲ್ಲೂರಪ್ಪ
ಊಳೂರು ಗ್ರಾಮ, ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ಪಹಿವಾಡು ಸಂಖ್ಯೆ |
|---|---|---|---|---|
| ಊಳೂರು ಗ್ರಾಮ | 26 (P) | 3-34 | H-40/ 2015-16 | 96/2015-16 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ ಊಳೂರು ಗ್ರಾಮದ ಸ.ನಂ.26 ಪೈಕಿ ವಿಸ್ತೀರ್ಣ 3-34 ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಉಪನೋಂದಣಿ ಕಛೇರಿ ಪತ್ರ ನಂ:**SRG-1-00102/2015-16 Dt.7-4-2015** ರ ಪ್ರಕಾರ ಕೆ.ಬಲ್ಲೂರಪ್ಪ ತಂದೆ: ಮಲ್ಲಿಕಾರ್ಜುನ ಅಲಿಯಾಸ್ ಮಲ್ಲಯ್ಯ, ಊಳೂರು ಗ್ರಾಮ ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಹೇಮಾದ್ರಪ್ಪ ತಂದೆ: ಬಲ್ಲೂರಪ್ಪ ಇವರು ದಿ: 18-4-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು ದಿ:18-3-2016, 02-4-2016, 29-4-2016, 07-5-2-16, 27-5-2016 ಮತ್ತು 03-6-2016 ರಂದು ಪ್ರಕರಣಕ್ಕೆ ಸಂಭಂಧಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂಧಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

## ವಾದಿಗಳು

ವಾದಿಗಳಾದ ಕೆ. ಬಲ್ಲೂರಪ್ಪ ತಂದೆ: ಮಲ್ಲಿಕಾರ್ಜುನ ಆಲಿಯಾಸ್ ಮಲ್ಲಯ್ಯ ಊಳೂರು ಗ್ರಾಮ ಇವರು ಕೆ.ಪಾಂಡುರಂಗಪ್ಪ ನವರ ಹೆಸರಿನಲ್ಲಿದ್ದ ಊಳೂರುಗ್ರಾಮದ ಸ.ನಂ.26 ಪೈಕಿ ವಿಸ್ತೀರ್ಣ 3-34 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ:**SRG-1-00102/2015-16 Dt.7-4-2015** ರ ಪ್ರಕಾರ ಖರೀದಿ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಸಂದರ್ಭದಲ್ಲಿ ನನಗೂ ಪಾಲು ಬರಬೇಕೆಂದು ಹೇಮಾದ್ರಪ್ಪ ತಂದೆ: ಬಲ್ಲೂರಪ್ಪ ಊಳೂರು ಗ್ರಾಮ ಇವರು ದಿ:18-4-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಪರಸ್ಪರರು ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ಖರೀದಿದಾರರಾದ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ ಹೇಮಾದ್ರಪ್ಪ ತಂದೆ: ಕೆ.ಬಲ್ಲೂರಪ್ಪ ಊಳೂರು ಗ್ರಾಮ ಇವರು ನನ್ನ ಮಗನಾದ ಕೆ.ಪಾಂಡುರಂಗಪ್ಪ ನವರ ಹೆಸರಿನಲ್ಲಿರುವ ಊಳೂರು ಗ್ರಾಮದ ಸ.ನಂ.26ಪೈಕಿ ವಿಸ್ತೀರ್ಣ3-34 ಸೆಂಟ್ಸ್‌ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ:**SRG-1-00102/2015-16 Dt.7-4-2015** ರ ಪ್ರಕಾರ ಕೆ.ಬಲ್ಲೂರಪ್ಪ ತಂದೆ ಮಲ್ಲಿಕಾರ್ಜುನ ಅಲಿಯಾಸ್ ಮಲ್ಲಯ್ಯ ಊಳೂರು ಗ್ರಾಮ ಇವರಿಗೆ ನೊಂದಣಿ ಪತ್ರ ಮೂಲಕ ಮಾರಾಟಮಾಡಿ ಹಕ್ಕು ಬದಲಾವಣೆ ಸಮಯದಲ್ಲಿ ನನಗೂ ಪಾಲು ಬರಬೇಕೆಂದು ದಿ:18-4-2015 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಪರಸ್ಪರ ಒಪ್ಪಿ ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ಖರೀದಿದಾರರಾದ ಕೆ. ಬಲ್ಲೂರಪ್ಪ ತಂದೆ: ಮಲ್ಲಿಕಾರ್ಜುನ ಅಲಿಯಾಸ್ ಮಲ್ಲಯ್ಯ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-00102/2015-16 Dt. 7-4-2015** ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಊಳೂರು ಗ್ರಾಮದ ಸ.ನಂ.26ಪೈಕಿ ವಿಸ್ತೀರ್ಣ 3-34 ಸೆಂಟ್ಸ್ ಜಮೀನು ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ:**SRG-1-00102/2015-16 Dt.7-4-2015** ರ ರನ್ವಯ ಕೆ.ಬಲ್ಲೂರಪ್ಪ ತಂದೆ: ಮಲ್ಲಿಕಾರ್ಜುನ ಅಲಿಯಾಸ್ ಮಲ್ಲಯ್ಯ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 10-06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಕಾರ್ಯಾಲಯ, ಕರೂರು, ಸಿರುಗುಪ್ಪ
ದಿ..............

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮಾಹಿತಿಗಾಗಿ